ಹಾಸನ ಡಿಸ್ಟ್ರಿಕ್ಟ್ ಬೋರ್ಡ.

1904ನೆ ಇಸವಿ ಸೆಪ್ಟಂಬರ್ ತಾರೀಖು 26ನೆ ಸೋಮವಾರ ದಿವಸ ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರು ಕೈರಿ ನಡೆಸಿದ ಸಭೆಯ ನಡವಳಿಕೆಗಳು.

ಹಾಜರು.

ಪಿ. ಆರ್. ಡಬ್ಲ್ಯೂ. ವೆದರಾಲ್ ಎಸ್ಕ್ವೈಯರ್‌ರವರು (ಪ್ರೆಸಿಡೆಂಟ್).

ಎಕ್ಸ್ ಅಫಿಷಿಯಲ್ ಮೆಂಬರುಗಳು.

ಮೆ|| ಸಿ. ಎ. ಮಹದೇವಶಾಸ್ತ್ರಿಗಳವರು, ಬಿ. ಎ., ಬಿ. ಸಿ. ಇ., ಹಾಸನ ಡಿವೀಜ್ ಎಕ್ಸಿಕ್ಯೂಟಿವ್ ಇಂಜನಿಯರ್.
,, ಸೈಯದ್ ಅಮೀರ್ ಹಸನ್‌ಸಾಹೇಬರು, ಸಕಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮೀಷನರ್.
,, ಕೆ. ಚಾಂಡಿರಾಜೇಅರು, ಬಿ. ಎ., ಹಾಸನ ಡಿ|| ಜನರಲ್ ಅ|| ಕಮೀಷನರವರು.
,, ಬಿ. ರಾಮಸ್ವಾಮೈಯ್ಯನವರು, ಬಿ. ಎ., ಬಿ. ಎಲ್, ಹಾಸನ ಡಿ|| ಟ್ರೆಜರಿ ಅ|| ಕಮೀಷನರವರು.
,, ಸಿ. ಅಪ್ಪಾಜಿಗೌಡ ಮೊದಲಿಯಾರ್ರು, ಹಾಸನ ಡಿ|| ಅಸಿಸ್ಟೆಂಟ್ ಸರ್ಜ್ಜನರವರು.
,, ಎಂ. ಕೆ. ತಿರುಮಲಾಚಾರ್ಯರವರು, ಬಿ. ಎ., ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟ್ ಸ್ಕೂಲ್ ಡಿ|| ಇನ್‌ಸ್ಪೆಕ್ಟರು.

ನಾನ್ ಅಫೀಷಿಯಲ್ ಮೆಂಬರುಗಳು.

ಮೆ|| ಎಸ್. ಶ್ರೀಕಂಠಯ್ಯನವರು.
,, ಜಿ. ತಿರುನಾರಾಯ್ಯಂಗಾರ್ಯರು.
,, ಕೇಣಿ ಮಹದೇವಪ್ಪನವರು.
,, ಗುರುಲಿಂಗೇಗೌಡರು.
,, ಮಹಲಿಂಗೇಗೌಡರು.
,, ನಂಜಂಣನವರು.
,, ಡಬ್ಲ್ಯೂ. ಎಲ್. ಕಾಪರ್ಸ್‌ಸಾಹೇಬರು.

ಮೆ|| ಅಬ್ದುಲ್ಲಾ ಸಾಬರು.
,, ಜೆ. ತಮ್ಮಯ್ಯನವರು.
,, ಸೂರ್ಯನಾರಾಯಣ ಶೆಟ್ಟರು.
,, ಕೆಂಚರಾಯಶೆಟ್ರು.
,, ಕೋನೇರಿ ರಾಮಶೆಟ್ರು.
,, ದಾಸಪ್ಪನವರು.

ಗೈರ್ ಹಾಜರು.

ಮೆ|| ಹಬೀಬುಲ್ಲಾ ಸಾಹೇಬರು.
,, ಎಸ್. ಡಿ. ವೆಂಕಟ್ರಾಮೈಯ್ಯನವರು.
,, ಎಂ. ಲಕ್ಷ್ಮೀನರಶಿಂಹೈಯ್ಯಂಗಾರ್ಯರು.

ಮೆ|| ಪದ್ಮಶೆಟ್ಟರು.
,, ಐಗೂರು ಮಲ್ಲೇಗೌಡರು.

I. 1904ನೆ ಇಸವಿ ಮಾರ್ಚ್ 5ರ ಮಠ್ಕಂ 3366--75 ಎಸ್. ಎಫ್. 105--03ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಮೇರೆ ವಿಧಾಯಕವಾಗಿರುವ ತಖ್ತೆಗಳ ನಿಖೆ ತಯಾರಾದ 1903—04ನೆ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಓದಲಾಯಿತು.

ತೀರ್ಮಾನ.—ರಿಪೋರ್ಟನ್ನು ಪ್ಯಾಸ್ಕ್ಯಾಡಿ ಗವರ್ನಮೆಂಟಿಗೆ ರವಾನಿಸಬಹುದೆಂತ ತೀರ್ಮಾನಿಸಲಾಯಿತು.

II. ಜೇಲೂರು ತಾಲ್ಲೂಕು ಹಳೇಬೀಡಿನಲ್ಲಿರುವ ಹಳೇ ಪೊಲೀಸ್ ಸ್ಟೇಷನ್ನು ಪ್ರಯಾಣೀಕರ ಉಪಯೋಗಕ್ಕಾಗಿ ಮು ಸಾಫರಿಖಾನಾವಾಗಿ ತೆಗದುಕೊಳ್ಳುವ ಭಾಗವನ್ನು ಸೂಚಿಸಿ ಹಾಸನ ಡಿವೀಜ್ ಎಕ್ಸಿಕ್ಯೂಟಿವ್ ಇಂಜನಿಯರ್‌ರವರಿಂದ ತಲಪಿದ 26--30-8-04ನೆ ಮಠ್ಕಂನ 355ನೆ ನಂಬರ್ ಪಾಕೆಟನ್ನು ಓದಲಾಯಿತು.

ತೀರ್ಮಾನ.—ಪ್ರಸಕ್ತವಾಗಿ ಕಟ್ಟಡವನ್ನು ಹಳೇಬೀಡಿಗೆ ಬರತಕ್ಕ ಪ್ರಯಾಣೀಕರ ಉಪಯೋಗಕ್ಕಾಗಿ ತೆಗದುಕೊಂಡು ದುರಸ್ತುಮಾಡಿಸುವ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸುವ ವಿಷಯದಲ್ಲಿ ಅಭ್ಯಂತರವೇನಾದರೂ ಉಂಟೆ? ಎಂತ ವಿಚಾರಿಸಿ ಹಾಸನ ಡಿಸ್ಟ್ರಿಕ್ಟ್ ಪೊಲೀಸ್ ಅ|| ಸೂಪರಿಂಟೆಂಡೆಂಟ್ ಸಾಹೇಬರವರಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

III. ಹಾಸನ ತಾಲ್ಲೂಕಿಗೆ ಕೈರಿದ ಗ್ರಾಮದಲ್ಲಿ ಬಂದು ವೈದ್ಯಶಾಲೇ ಅಥವಾ ಆಸ್ಪತ್ರೆಯನ್ನಾಗಲಿ ಸ್ಥಾಪಿಸುವ ವಿಷಯದಲ್ಲಿ ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರು 12—8—04ನೆ ಮಠ್ಕಂನಲ್ಲಿ ನಡಿಸಿದ ವೋಟಿಂಗಿನ ತೀರ್ಮಾನವನ್ನು ಓದಲಾಯಿತು.

ಮೇಲ್ಕಂಡ ವಿಷಯದಲ್ಲಿ ಗ್ರಾಮ ಯೂನಿಯ್ ಪಂಚಾಯಿತದ ಮತ್ತು ಹಾಸನ ತಾಲ್ಲೂಕು ಬೋರ್ಡಿನ ತೀರ್ಮಾನವನ್ನು ಸಹಾ ಓದಲಾಯಿತು.

ತೀರ್ಮಾನ.—ಮೇಲೆ ಓದಲ್ಪಟ್ಟ ಯೂನಿಯ್ ಪಂಚಾಯಿತದವರು ಸೂಚಿಸಿರುವಂತೆ ಕ್ರಮವಾದ ಆಸ್ಪತ್ರೆಯನ್ನು ಸ್ಥಾಪಿಸಿ ಪ್ರೊವಿಷಿಯಲ್ ಫಂಡಿನಿಂದ ಹೆಚ್ಚು ಖರ್ಚು ಮಾಡಲು ಅವಕಾಶವಿಲ್ಲವಾಗಿ ಗ್ರಾಮದಲ್ಲಿ ಬಂದು ನೇಟಿವ್ ವೈದ್ಯಶಾಲಾವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು.

IV. ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳಿಗೆ ಮೈಲಿಯಾನಾ ದರಗಳನ್ನು ಹೆಚ್ಚಿಸಬೇಕೆಂತ ಫೈನ್ಯಾನ್ಸ್ ಕಮಿಟಿಯವರು ಅಭಿ ಪ್ರಾಯಪಟ್ಟು ಕಳುಹಿಸಿದ ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳ ಪಟ್ಟಿಯನ್ನು 4—6—04ನೆ ಮಠ್ಕಂನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ವಿಾಟಿಂಗ್‌ನಲ್ಲಿ ಓದಿ ತೀರ್ಮಾನ ಮಾಡಿರುವದರಲ್ಲಿ ಭರ್ತವಳ್ಳಿ—ಆಲೂರ್ (ಲೂಪ್) ಅಡ್ಡ ರಸ್ತೆಯನ್ನು ಬಿಟ್ಟಿರುವ ವಿಚಾರ ಕುರಿತು ಗೌರ್ನಮೆಂಟಿನಿಂದ ತಲ್ಪಿರುವ 20—7—04ನೆ ಮಠ್ಕಂ 773-8—ಎಲ್. ಬಿ. 6-04ನೆ ನಂ. ಪ್ರೊಸೀಡಿಂಗ್ಸಿನ 6ನೆ ಪ್ಯಾರಾವನ್ನು ಪುನಹ ಓದಲಾಯಿತು.

ಭರ್ತವಳ್ಳಿ–ಆಲೂರ ಅಡ್ಡರಸ್ತೆಯು ಡಿಸ್ಟ್ರಿಕ್ಟ್ ಫಂಡ್ ಬಜೆಟ್ ಜೊತೆಯಲ್ಲಿ ಕಳುಹಿಸಲ್ಪಟ್ಟ ಫೈನ್ಯಾನ್ಸ್ ಕಮಿಟಿಯವರ ರಿಪೋರ್ಟಿನಲ್ಲಿ ಹಸ್ತದೋಷದಿಂದ ಬಿಡಲ್ಪಟ್ಟದ್ದಾಗಿಯೂ ಸದರಿ ರಸ್ತೆಗೆ ನಮೂದು ಮಾಡಿರುವ ಹೆಚ್ಚಿಗೆ ಧರವು ಪ್ಯಾಸಾಗಬಹುದೆಂ ತಲೂ 24—9—04ನೆ ಮರ್ಕ್ಯಂನಲ್ಲಿ ಫೈನ್ಯಾನ್ಸ್ ಕಮಿಟಿಯವರು ಮಾಡಿರುವ ತೀರ್ಮಾನವನ್ನು ಸಹಾ ಓದಲಾಯಿತು.

ತೀರ್ಮಾನ.—ಭರ್ತವಳ್ಳಿ-ಆಲೂರು ಅಡ್ಡರಸ್ತೆ ರಿಪೇರಿಗೆ ಮೈಲಿ ಬಂದಕ್ಕೆ ಹೆಚ್ಚು ದರವನ್ನು ಒಪ್ಪಿರುವದಾಗಿ ತೀರ್ಮಾನಿಸಲಾಯಿತು.

V. ಡಿಸ್ಟ್ರಿಕ್ಟ್ ಫಂಡಿನಿಂದ ನಡಿಯಬೇಕಾದ ಕಾಂಗಾರಿಗಳಿಗೆ ಅಂದಾಜಾಗಳಿಗೆ ಸಂಬಂಧಪಟ್ಟ ನಡವಳಿಕೆಗಳನ್ನು ಓದಲಾಯಿತು.

ತೀರ್ಮಾನ.—ಈ ಕೆಳಗೆ ನಮೂದು ಮಾಡಿರುವ ಕೆಲಸಗಳ ಅಂದಾಜಾಗಳನ್ನು ಅವುಗಳ ಎದುರಿಗೆ ನಮೂದಿಸಿರುವ ಮೊಬಲಗ್ಯೆ ಅತಿಕ್ರಮಿಸದಂತೆ ಚಾಲ್ತಿ ಸಾಲಿನಲ್ಲಿ ಅಂದಾಜಾಗಳನ್ನು ಮಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

	ಕೆಲಸಗಳ ಹೆಸರು.	ಅಂದಾಜಾ ಮೊಬಲಗು. ರೂ.	ಆ.	ಪೈ.
1.	ಮಂಜರಾಬಾದ್ ತಾಲ್ಲೂಕು ಹರ್ಬಾಳ್ ಗಣ್ಯಮದಲ್ಲಿ ಬಂದು ಭಾವಿ ತೆಗಿಸತಕ್ಕದ್ದು	458	0	0
2.	ಬೆಳಗೋಡು ದೊಡ್ಡಿ ನೆಲಕ್ಕೆ ಕಲ್ಲು ಚಪ್ಪಡಿ ಹಾಸತಕ್ಕದ್ದು ..	149	0	0
3.	ಆಲೂರ ಸಬ್ ತಾಲ್ಲೂಕು ಪಾಳ್ಯದ ಮುಸಾಫರ್‌ಖಾನೆಗೆ ಸುಣ್ಣ ಹಚ್ಚಿಸತಕ್ಕದ್ದು	9	0	0
4.	ಚನ್ನರಾಯಪಟ್ಟಣ ಮುಸಾಫರ್‌ಖಾನಾ ರಿಪೇರಿ ಮಾಡತಕ್ಕದ್ದು ...	249	0	0
5.	ಹೊಳಿ ನರಸೀಪುರದ ಸೇತ್ವೆಬಳಿ ಇರುವ ಸುಂಕದ ಮನೆ ರಿಪೇರಿ ಮಾಡತಕ್ಕದ್ದು	191	0	0
6.	ಹೊಳಿ ನರಸೀಪುರದ ತಾಲ್ಲೂಕು ಹಿರಿಪಳ್ಳಿ ಕೊಪ್ಪಲ್‌ನಲ್ಲಿ ಬಂದು ಭಾವಿ ತೋಡಿಸತಕ್ಕದ್ದು	360	0	0

VI. ಎಸಳೂರು ಪೇಟೆಯಲ್ಲಿ ಜನಗಳ ಉಪಯೋಗಕ್ಕಾಗಿ ಹಾಲಿ ಗೊತ್ತಾಗಿರತಕ್ಕ ಜಾಗದಲ್ಲಿ ಬಂದು ಭಾವಿಯನ್ನು ತೋಡಿಸುವದು ಅತ್ಯವಶ್ಯಕವೆಂತಲೂ ಸದರಿ ಭಾವಿ ಕಾಂಗಾರಿಗಾಗಿ ಅಪ್ಪಣ್ಣಶೆಟ್ಟರು ಎಂಬುವರು 200 ರೂಪಾಯಿ ಕಂಟ್ರಿಬ್ಯೂಷ್ಯನಿ ಚಂದಾವನ್ನು ಡಿಪಾಜಿಟ್ ಮಾಡಿರುವದ್ದರಿಂದಲೂ ಸಹಾ ಸದರಿ ಕಾಂಗಾರಿಗೋಸ್ಕರ ಕಳುಹಿಸಿರುವ 706 ರೂಪಾಯಿ ಅಂದಾಜಾಕ್ಕೆ ಸಂಬಂಧಪಟ್ಟ ಸಕ್ಲೇಶಪುರದ ಸಬ್ ಡಿವೀಜ್ಞ ಆಫಿಸರವರಿಂದ ಬಂದಿರುವ 30—3—04ನೆ ಮರ್ಕ್ಯಂ 781ನೆ ನಂಬರು ಯಾದಿ ಆಜ್ಞೆರುಳ್ಳ ನಡವಳಿಕೆಯನ್ನು ಓದಲಾಯಿತು.

ತೀರ್ಮಾನ.—ಮೇಲ್ಕಂಡ ಕಾಂಗಾರಿ ಅಂದಾಜಾವನ್ನು ಗೌರ್ನಮೆಂಟ್ ಮಂಜೂರಾತಿ ಬಗ್ಯೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

VII. ಚಾಲ್ತಿ ಸಾಲಿನಲ್ಲಿ ಹಳ್ಳಿ ಮೈಸೂರು-ಗುಬ್ಬಿ ರಸ್ತೆಯಲ್ಲಿ ಬಂದು ಹೊಸ ಮೊಹರಿ ಕಟ್ಟತಕ್ಕ ಕಾಂಗಾರಿಯನ್ನು ನಡಿಸತಕ್ಕ ಭಾಗದಲ್ಲಿ ಅಪ್ಪಣೆ ಬೇಡಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ 18—7—04ನೆ ಮರ್ಕ್ಯಂ 170ನೇ ನಂಬರ್ ಯಾದಿ ಆಜ್ಞೆರಾದ ನಡವಳಿಕೆಯನ್ನು ಓದಲಾಯಿತು.

ತೀರ್ಮಾನ.– ಮುಖ್ಯವಾದ ಇತರ ಕೆಲಸಗಳೊಂದಿಗೆ ಮೇಲ್ಕಂಡ ಕೆಲಸವನ್ನು ನಡಿಸಲು ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣ ಸಾಕಾಗುತ್ತೆಂತ ಕಾಣಬರುವದಿಲ್ಲವಾಗಿ ಸದರಿ ಕೆಲಸವನ್ನು ನಡಿಸುವದನ್ನು ಸಧ್ಯಕ್ಕೆ ನಿಲ್ಲಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

VIII. 500 ರೂಪಾಯಿಗಳು ಮತ್ತು ಅದಕ್ಕೆ ಕಮ್ಮಿ ಮೊಬಲಗಿನಲ್ಲಿ ಲಾಗವಡು ಆಗುವ ಕೆಲಸಗಳನ್ನು ಮಂಜೂರ್ಮಾಡಲು ಲೋಕಲ್ ಬೋರ್ಡು ರೂಲ್ಸ್ 138ನೆ ಪ್ಯಾರಾ ಅನುಸರಿಸಿ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಅಧಿಕಾರ ವಿರುತ್ತೆಯೆ ಹೊರ್ತು ಪ್ರೆಸಿಡೆಂಟರಿಗೆ ಇಲ್ಲವೆಂಬ ಭಾಗವನ್ನ ಸೂಚಿಸಿ ಸೆಕ್ರಿಟೆರಿಯವರಿಂದ ತಲಪಿದ 19—9—04ನೆ ಮರ್ಕ್ಯಂ 2271-116-2—ಎಲ್. ಬಿ. ನೆ ನಂಬರ್ ಡಾಕೆಟನ್ನು ಓದಿ ವಿಲೇಯಿಡಿಸಲಾಯಿತು.

IX. ಡಿಸ್ಟ್ರಿಕ್ಟ್ ಬೋರ್ಡು ಮೆಂಬರ್ ಮೆ|| ವೆಂಕಟರಾವ್ಯೆಯ್ಯನವರು, ಹೊಳೇನರಸೀಪುರದಲ್ಲಿ ಗೈರ್ ಹಾಜರಾಗಿರುವದ್ದರಿಂದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ನೋಟಿಸ್ ಜಾರಿ ಮಾಡಿಸಲು ಅವಕಾಶವಿರಲಿಲ್ಲವಾಗಿ ನಮೂದು ಮಾಡಿ ಹೊಳೇನರಸೀಪುರದ ತಾಲ್ಲೂಕು ಅಮಲ್‌ದಾರ್ರಿಂದ ತಲ್ಪಿದ 21 – 9 – 04ನೆ ಮರ್ಕ್ಯಂ 98ನೆ ನಂಬರ್ ರಿಪೋರ್ಟನ್ನು ಓದಿ ವಿಲೇಯಿಡಿಸಲಾಯಿತು.

X. ಮೈಸೂರು ದಸರಾ ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು ಮೊದಲು ನಿಷ್ಕರ್ಷೆ ಮಾಡಿದ್ದಂತೆ 22—10—04 ತಾರೀಖಿಗೆ ಬದಲಾಗಿ 21—10 – 04ನೆ ತಾರೀಖಿನಲ್ಲಿ ಪ್ರಾರಂಭವಾಗುತ್ತೆಂಬ ವಿಷಯವನ್ನು ಬೋರ್ಡು ಮೆಂಬರುಗಳಿಗೆ ತಿಳಿಸಲಾಯಿತು.

XI. ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗನ್ನು ಬರುವ ನವೆಂಬರ್ 14ನೆ ತಾರೀಖು ಸೋಮವಾರ ಮಧ್ಯಾನ್ಹ 3 ಘಂಟೆಗೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯೂ. ವೆದರಾಲ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡು.